**ಒಎಸ್ ಸಂ.ಃ 21/2018**
**ಪಿಡಬ್ಲ್ಯೂ ಃ 2 (ವಿ.ನಾರಾಯಣ)**
**ದಿನಾಂಕ 23-10-2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ- ಶ್ರೀ ಎ.ಎಲ್.ಎನ್ ವಕೀಲರಿಂದ**

ನಾನು ಡಿಪ್ಲೋಮೋ ಸಿವಿಲ್ ಇಂಜಿನಿಯರ್ ಪದವೀಧರರು. ನಾನು ನೀರು ಸರಬರಾಜು ಮಂಡಳಿ ಬೆಂಗಳೂರಿನಲ್ಲಿ ಸಿವಿಲ್ ಇಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ನಾನು ಎಸ್‌ಎಸ್‌ಎಲ್‌ಸಿ ಮುಗಿಸಿದ ನಂತರ ಟೀಚರ್ ಆಗಿ ಕೆಲಸ ಮಾಡಿದ್ದೆ. ನಾನು ಹಂಗಾಮಿ ಟೀಚರ್ ಆಗಿ ಎರಡು ವರ್ಷಗಳ ಕಾಲ ಕರ್ತವ್ಯ ನಿರ್ವಹಿಸಿರುತ್ತೇನೆ. ನಾನು ಬೆಂಗಳೂರಿನ ನೀರು ಸರಬರಾಜು ಮಂಡಳಿಯಲ್ಲಿ ಏಳು ವರ್ಷಗಳ ಕಾಲ ಖಾಯಂ ಸಿವಿಲ್ ಇಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸಿದ್ದೆ. ನಾನು 1972 ರಲ್ಲಿ ಸ್ವಯಂ ನಿವೃತ್ತಿಯಾಗಿರುತ್ತೇನೆ. ನಂತರ ನಾನು ಮುಳಬಾಗಿಲು ತಾಲ್ಲೂಕಿನಲ್ಲಿ ಸಮಾಜಸೇವೆ ಮತ್ತು ರಾಜಕೀಯ ಮಾಡುತ್ತಿದ್ದೆ. ನಾನು ಆ ಸಮಯದಲ್ಲಿ ಕಾಂಗ್ರೇಸ್ ಪಕ್ಷದಲ್ಲಿ ಇದ್ದೆ ಎಂದರೆ ಸರಿ. ಈಗ ನಾನು ರಾಜಕರಣ ಬಿಟ್ಟಿರುತ್ತೇನೆ. ಎಂ.ವಿ ವೆಂಕಟಪ್ಪರವರು ಮುಳಬಾಗಿಲು ವಿಧಾನಸಭಾ ಕ್ಷೇತ್ರ ಶಾಸಕರಾಗಿ ಆಯ್ಕೆಯಾಗಿದ್ದರು ಎಂದರೆ ಸರಿ. ಎಂ.ವಿ ವೆಂಕಟಪ್ಪರವರು ದರಕಾಸ್ತು ಕಮಿಟಿಯಲ್ಲಿ ಅಧ್ಯಕ್ಷರಾಗ್ದಿರು ಎಂದರೆ ಸರಿ. ಆಗ ನಾನು ಕೂಡ ದರಕಾಸ್ತು ಕಮಿಟಿಯಲ್ಲಿ ಸದಸ್ಯನಾಗಿದ್ದೆ ಎಂದರೆ ಸರಿ. ಅಗರಂ ಸೋಮಣ್ಣ ಮತ್ತು ಮೊಮ್ಮಸಂದ್ರದ ವೆಂಕಟರಾಮಪ್ಪರವರು ನನ್ನ ಜೊತೆ ಸಹ ಸದಸ್ಯರಾಗಿದ್ದರು ಎಂದರೆ ಸರಿ. ಸದರಿ ಕಮಿಟಿಯಲ್ಲಿ ತಹಶೀಲ್ದಾರ್‌ರವರು ಕೂಡ ಕಾರ್ಯದರ್ಶಿಗಳು ಎಂದರೆ ಸರಿ.

ದರಕಾಸ್ತು ಕಮಿಟಿಯಲ್ಲಿ ಜಮೀನನ್ನು ಮಂಜೂರು ಮಾಡಬೇಕಾದಲ್ಲಿ ಬಗರ್‌ಹುಕ್ಕುಂ ಸಾಗುವಳಿ 8-10 ವರ್ಷ ಮಾಡುತ್ತಿರುವ ವ್ಯಕ್ತಿಯ ಫಾರಂ ನಂ.53 ರಲ್ಲಿ ಅರ್ಜಿ ಕೊಡಬೇಕಾಗುತ್ತದೆ ಎಂದರೆ ಸರಿ. ಆ ಅರ್ಜಿಯಲ್ಲಿ ಸರ್ವೆ ನಂಬರ್ ವಿವರಗಳು, ಆತನ ಮತ್ತು ಆತನ ಕುಟುಂಬಕ್ಕೆ ಮೊದಲೇ ಇದ್ದಂತಹ ಆಸ್ತಿಯ ವಿವರಗಳು, ಸಾಗುವಳಿ ಮಾಡುತ್ತಿರುವ ಜಮೀನಿನ ವಿಸ್ತೀರ್ಣ, ಚೆಕ್ಕುಬಂಧಿ, ಎಷ್ಟು ವರ್ಷದಿಂದ ಬಗರ್‌ಹುಕ್ಕುಂ ಸಾಗುವಳಿ ಮಾಡುತ್ತಿದ್ದರು ಎನ್ನುವ ಬಗ್ಗೆ ಹಾಗೂ ಇತರೆ ವಿವರಗಳನ್ನು ನಮೂದು ಮಾಡಬೇಕು ಎಂದರೆ ಸರಿ. ಸದರಿ ಅರ್ಜಿಯನ್ನು ತಹಶೀಲ್ದಾರ್‌ರವರಿಗೆ ನೀಡಬೇಕು ಎಂದರೆ ಸರಿ. ಅವರು ಸದರಿ ಅರ್ಜಿಯನ್ನು ಕಂದಾಯ ನಿರೀಕ್ಷಕರು ಮತ್ತು ಗ್ರಾಮ ಲೆಕ್ಕಿಗರವರಿಗೆ ಕಳುಹಿಸಿರುತ್ತಾರೆ ಎಂದರೆ ಸರಿ. ಅವರು ಸ್ಥಳ ಪರಿಶೀಲನೆ

ಮಾಡಿ ವರದಿ ಕೊಡುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸರ್ವೆ ಕೂಡ ಮಾಡುತ್ತಾರೆ ಎಂದು ಹೇಳುತ್ತಾರೆ. ಅವರು ಅರ್ಜಿಯಲ್ಲಿ ಕೊಟ್ಟ ಮಾಹಿತಿಗಳನ್ನು ಹಾಗೂ ಸ್ಥಳ ತನಿಖೆ ಮಾಡಿದಾಗ ಕಂಡು ಬಂದ ವಿಚಾರಗಳು ಒಂದಕ್ಕೊಂದು ತಾಳೆ ಬಂದಲ್ಲಿ ಮಾತ್ರ ವರದಿ ಕೊಡುತ್ತಾರೆ. ಅರ್ಜಿಯಲ್ಲಿ ಕಂಡ ವಿಚಾರಗಳು ಮತ್ತು ಸ್ದಳ ತನಿಖೆಯಲ್ಲಿ ಕಂಡ ವಿಚಾರ ಒಂದಕ್ಕೊಂದು ತಾಳೆಯಾಗದೇ ಇದ್ದಲ್ಲಿ ವಿರುದ್ದ ವರದಿ ಕೊಡುತ್ತಾರೆ ಎಂದರೆ ಸಾಕ್ಷಿಯು ಕಂದಾಯ ನಿರೀಕ್ಷಕರು ಏನಾದರೂ ನ್ಯೂನ್ಯತೆಗಳು ಇದ್ದರೆ ಅದನ್ನು ಸರಿಪಡಿಸಿಕೊಂಡು ಬಂದು ತಹಶೀಲ್ದಾರ್‌ರವರಿಗೆ ವರದಿ ಸಲ್ಲಿಸುತ್ತಾರೆ ಎಂದು ಹೇಳುತ್ತಾರೆ. ವರದಿ ತಹಶೀಲ್ದಾರ್‌ರವರಿಗೆ ಬರುವವರೆವಿಗೂ ಆ ಕಡತವು ದರಕಾಸ್ತು ಕಮಿಟಿಯ ಸಮಕ್ಷಮ ಬರುವ ಪ್ರಶ್ನೆ ಉದ್ಭವಿಸುವುದಿಲ್ಲ. ತಹಶೀಲ್ದಾರ್‌ರವರು ಅರ್ಜಿದಾರರಿಗೆ ನ್ಯೂನ್ಯತೆಗಳನ್ನು ಸರಿಪಡಿಸಿಕೊಳ್ಳಲು ಯಾವುದೇ ನೋಟೀಸನ್ನು ಕೊಡುವುದಿಲ್ಲ.

ದಾವಾ ಆಸ್ತಿಯನ್ನು ವಾದಿಗೆ ಮಂಜೂರು ಮಾಡಿರುತ್ತೇವೆ. ದಾವಾ ಆಸ್ತಿಯನ್ನು ಮಂಜೂರು ಮಾಡಿ ಎಂದು ವಾದಿ ಸದರಿ ಕಮಿಟಿಯ ಮುಂದೆ ಅರ್ಜಿ ಕೊಟ್ಟಿರುವುದಿಲ್ಲ. ಸಾಕ್ಷಿ ಮುಂದುವರೆದು ಅರ್ಜಿ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ನಮ್ಮ ತಂದೆಯ ಹೆಸರು ಮುನಿವೆಂಕಟಪ್ಪ, 1ನೇ ಪ್ರತಿವಾದಿಯ ತಂದೆಯ ಹೆಸರು ಕೂಡ ಮುನಿವೆಂಕಟಪ್ಪ ಎಂದರೆ ಸರಿ. ನಮ್ಮ ತಂದೆ ಮತ್ತು 1ನೇ ಪ್ರತಿವಾದಿಯ ತಂದೆಯ ಮಧ್ಯೆ ಜಮೀನು ವಿಚಾರಗಳಲ್ಲಿ ಕೇಸುಗಳು ನಡೆದಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಶ್ರೀನಿವಾಸರೆಡ್ಡಿಯವರು ಮುನಿಯಮ್ಮ ಎನ್ನುವವರ ಮೇಲೆ ಕೇಸು ಹಾಕಿರುವ ವಿಚಾರ ಗೊತ್ತಿರುವುದಿಲ್ಲ. ಆ ಕೇಸಿನಲ್ಲಿ ನಾನು ಶ್ರೀನಿವಾಸರೆಡ್ಡಿಯವರ ಪರ ಸಾಕ್ಷ್ಯ ಹೇಳಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮತ್ತು ಪ್ರತಿವಾದಿಯರ ನಡುವೆ ಕೊಳವೆಬಾವಿ ವಿಚಾರವಾಗಿ ಯಾವುದೇ ಮನಸ್ತಾಪ ಇರುವುದಿಲ್ಲ ಹಾಗೂ ಯಾವುದೇ ಕ್ರಿಮಿನಲ್ ಪ್ರಕರಣಗಳು ಇರುವುದಿಲ್ಲ. ನಮಗೂ ಪ್ರತಿವಾದಿಯರಿಗೂ ಹಲವಾರು ವಿಚಾರಗಳಲ್ಲಿ ತಕರಾರು ಇದ್ದು ಹಾಗೂ ಕೇಸುಗಳು ಇದ್ದು ಇದರ ವಿಚಾರವಾಗಿ ಮನಸ್ತಾಪ ಇರುವುದರಿಂದ ನನಗೆ ಏನು ಗೊತ್ತಿಲ್ಲ ಸರಿಯಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಕಾರಣಗಳಿಂದ ನಮಗೂ ಮತ್ತು 1ನೇ ಪ್ರತಿವಾದಿಯ ಕುಟುಂಬದವರಿಗೂ ಮನಸ್ತಾಪ ಇದೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯನ್ನು ನಾನು ನೋಡಿರುತ್ತೇನೆ. ಮಂಜೂರಾಗುವ ಮೊದಲು ಆಸ್ತಿಯು ಸರ್ಕಾರದ ಹೆಸರಿನಲ್ಲಿತ್ತು. ಸರ್ಕಾರದ ಹೆಸರು ಬಿಟ್ಟು ಬೇರೆಯವರ ಹೆಸರು ಇದ್ದರೆ ಮಂಜೂರು ಮಾಡಲು ಬರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯ ಪೂರ್ವಕ್ಕೆ ಆಂಜಿನಪ್ಪನವರ ಆಸ್ತಿ ಸರ್ವೆ ನಂ.44, ಪಶ್ಚಿಮಕ್ಕೆ-ಲಕ್ಷ್ಮಕ್ಕರವರ ಆಸ್ತಿ, ಉತ್ತರಕ್ಕೆ-ನಂಜುಂಡಗೌಡ ಮತ್ತು ಹುಸೇನ್ ಸಾಬ್ ಮತ್ತು ದಕ್ಷಿಣಕ್ಕೆ-ಮಲ್ಲಕ್ಕ, ವೆಂಕಟರಮಣಪ್ಪ ಮತ್ತು ಬಂಗಾರಪೇಟೆ ಗಡಿ ಇರುತ್ತದೆ. ನಾನು ಹೇಳುತ್ತಿರುವ ಚೆಕ್ಕುಬಂಧಿ ಸರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಸುಮಾರು 25 ವರ್ಷಗಳಿಗಿಂತಲೂ ಮೇಲ್ಪಟ್ಟು ಪ್ರತಿವಾದಿಯರು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಮೂಲತಃ ಜೋಡಿದಾರರಿಗೆ ಸೇರಿದ್ದು ಎಂದರೆ ಸರಿ. ಸಾಕ್ಷಿ ಮುಂದುವರೆದು ಸರ್ಕಾರ ವಶಪಡಿಸಿಕೊಂಡಿರುತ್ತದೆ ಎಂದು ಹೇಳುತ್ತಾರೆ. ಇನಾಮು ಒಬಲೀಶ್ ಮಾಡಿಕೊಂಡ ಆದೇಶವನ್ನು ನಾನು ನೋಡಿರುತ್ತೇನೆ. ಮಂಜೂರಾತಿಯಲ್ಲಿ ನಾವು ಇನಾಮು ಒಬಲೀಶ್ ಆದೇಶವನ್ನು ನಮೂದು ಮಾಡುವುದಿಲ್ಲ. ಆ ರೀತಿ ಯಾವುದೇ ಆದೇಶ ಆಗಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶ್ರೀನಿವಾಸರೆಡ್ಡಿಯವರು ಯಾವತ್ತೂ ದಾವಾ ಆಸ್ತಿಯ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.44 ಶ್ರೀನಿವಾಸರೆಡ್ಡಿಯವರಿಗೆ ಮಂಜೂರು ಆಗಿರುವುದೇ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ. ಇದೆ

(ಸುಜಾತ ಸುವರ್ಣ.ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮುಳಬಾಗಿಲು.